ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೫

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತ ನಾಲ್ಕನೇ ಅಧಿವೇಶನ

**ಶುಕ್ರವಾರ, ದಿನಾಂಕ: ೧೩ನೇ ಡಿಸೆಂಬರ್, ೨೦೨೪**

---

**ಸಮೂಹ – V**

೧. ಸಮಾಜ ಕಲ್ಯಾಣ ಸಚಿವರು

೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು

೩. ಕೃಷಿ ಸಚಿವರು

೪. ಕಾರ್ಮಿಕ ಸಚಿವರು

೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

---

### ಅಂಗನವಾಡಿ ಕೇಂದ್ರಗಳನ್ನು ತೆರೆಯುವ ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೬೧ (೫೭೧) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅಂಗನವಾಡಿ ಶಾಲೆಗಳ (ಕೇಂದ್ರ) ಸಂಖ್ಯೆ ಎಷ್ಟು; ಸ್ವಂತ ಕಟ್ಟಡಗಳಲ್ಲಿರುವ ಅಂಗನವಾಡಿ ಶಾಲೆಗಳೆಷ್ಟು ; ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳೆಷ್ಟು ; (ಈ ಬಗ್ಗೆ ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಬೆಂಗಳೂರು ನಗರ ಜಿಲ್ಲೆಯಲ್ಲಿ ಬಾಡಿಗೆ ಕಟ್ಟಡದಲ್ಲಿ ಅಥವಾ ಸರ್ಕಾರಿ ಶಾಲೆಗಳ ಕಟ್ಟಡದಲ್ಲಿ ನಡೆಸುತ್ತಿರುವ ಅಂಗನವಾಡಿ ಕೇಂದ್ರಗಳು ಎಷ್ಟು ; (ತಾಲ್ಲೂಕುವಾರು ಕೇಂದ್ರಗಳವಾರು ಮಾಹಿತಿ ಒದಗಿಸುವುದು)

(ಇ) ಸ್ವಂತ ಕಟ್ಟಡವಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಹೊಸದಾಗಿ ಕಟ್ಟಡ ನಿರ್ಮಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು; ಕಳೆದ ಎರಡು ವರ್ಷಗಳಿಂದೀಚೆಗೆ ಎಷ್ಟು ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ; (ವಿವರ ನೀಡುವುದು)

(ಈ) ಬೆಂಗಳೂರು ನಗರ ಜಿಲ್ಲೆಗೆ ಸೇರಿದ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ ಕೆ.ಹೊಸಹಳ್ಳಿಯಲ್ಲಿ (ಗೊಲ್ಲರಪಾಳ್ಯ) ಎಷ್ಟು ವರ್ಷಗಳಿಂದ ಅಂಗನವಾಡಿ ಕೇಂದ್ರವನ್ನು ಸ್ಥಾಪನೆ ಮಾಡಿ ನಡೆಸಿಕೊಂಡು ಬರಲಾಗುತ್ತಿದೆ ;

(ಉ) ಈ ಅಂಗನವಾಡಿ ಕೇಂದ್ರ ಸರ್ಕಾರಿ ಶಾಲೆಯ ಕೊಠಡಿಯಲ್ಲಿ ನಡೆಯುತ್ತಿರುವುದು ಹಾಗೂ ಈ ಸರ್ಕಾರಿ ಶಾಲೆಯ ಕೊಠಡಿಯನ್ನು ಕೂಡಲೇ ತೆರವುಗೊಳಿಸಬೇಕೆಂದು ಆ ಶಾಲೆಯವರು ಒತ್ತಾಯಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಬಂದಿದ್ದಲ್ಲಿ, ಈ ಜಿ. ಹೊಸಹಳ್ಳಿ (ಗೊಲ್ಲರಪಾಳ್ಯ) ಗ್ರಾಮದ ಅಂಗನವಾಡಿ ಕೇಂದ್ರ ಕಟ್ಟಡವನ್ನು ಯಾವಾಗ ನಿರ್ಮಿಸಲಾಗುವುದು ; (ವಿವರ ಒದಗಿಸುವುದು)

(ಋ) ೨೦೨೪–೨೫ನೇ ಸಾಲಿಗೆ ರಾಜ್ಯದಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಸರ್ಕಾರ ಕ್ರಮ ತೆಗೆದುಕೊಂಡಿದೆಯೇ ; ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ತೆರೆಯಲಾಗುವುದು ; (ವಿವರ ನೀಡುವುದು)

(ಎ) ಬೆಂಗಳೂರು ಉತ್ತರ ತಾ:ಲಿಂಗದೀರನಹಳ್ಳಿಯಲ್ಲಿ ಅಂಗನವಾಡಿ ಕೇಂದ್ರ ತೆರೆಯಲು ಎಲ್ಲಾ ಅರ್ಹತೆಯನ್ನು ಹೊಂದಿದ್ದು, ನೂತನವಾಗಿ ಅಂಗನವಾಡಿ ಕೇಂದ್ರವನ್ನು ತೆರೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದರೂ ಸಹ ಇದುವರೆವಿಗೂ ಯಾವುದೇ ಕ್ರಮವಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ೨೦೨೪–೨೫ನೇ ಸಾಲಿನಲ್ಲಿ ನೂತನವಾಗಿ ಅಂಗನವಾಡಿ ಕೇಂದ್ರವನ್ನು ತೆರೆಯಲಾಗುವುದೇ ? (ವಿವರ ನೀಡುವುದು)

## SC/ST ವಿದ್ಯಾರ್ಥಿನಿಲಯಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೨ (೬೧೫) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳ ಸಲುವಾಗಿ ಇರುವ ವಸತಿ ನಿಲಯಗಳ ಸಂಖ್ಯೆ ಎಷ್ಟು ; (ವಿಧಾನಸಭಾವಾರು ಮಾಹಿತಿ ಒದಗಿಸುವುದು)

(ಆ) ಸದರಿ ವಸತಿ ನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಇ) ಸ್ವಂತ ಕಟ್ಟಡವನ್ನು ಹೊಂದಿರುವಂತಹ ವಸತಿ ನಿಲಯಗಳ ಸಂಖ್ಯೆ ಎಷ್ಟು ; ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ನಿಲಯಗಳ ಸಂಖ್ಯೆ ಎಷ್ಟು ;

(ಈ) ೨೦೨೪–೨೫ನೇ ಸಾಲಿನಲ್ಲಿ ಸ್ವಂತ ಕಟ್ಟಡ ನಿರ್ಮಾಣಕ್ಕಾಗಿ ಎಷ್ಟು ಹಣವನ್ನು ಒದಗಿಸಲಾಗಿದೆ ; ಮತ್ತು ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ ;

(ಉ) ಯಾವ ಕಾಲಮಿತಿಯೊಳಗೆ ಬಾಡಿಗೆಯಲ್ಲಿರುವಂತಹ ವಸತಿ ನಿಲಯಗಳನ್ನು ಸ್ವಂತ ಕಟ್ಟಡಗಳಿಗೆ ಸ್ಥಳಾಂತರಿಸಿ ಅನುಕೂಲ ಮಾಡಿಕೊಡಲಾಗುವುದು ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೩ (೬೭೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ೨೮ ಇಲಾಖೆಗಳ ಮೇಲ್ವಿಚಾರಣಾ ಅಧಿಕಾರವನ್ನು ಸ್ಥಳೀಯ ಗ್ರಾಮ ಪಂಚಾಯತಿಗಳಿಗೆ ಹಸ್ತಾಂತರಿಸದಿರಲು ಕಾರಣವೇನು ; ಯಾವಾಗ ಹಸ್ತಾಂತರಿಸಲು ಕ್ರಮ ವಹಿಸಲಾಗುವುದು ;

(ಆ) ಸಂಪನ್ಮೂಲ ಮತ್ತು ಅಧಿಕಾರ ನೀಡದೇ ಕೇವಲ ಜವಾಬ್ದಾರಿಯ ಹೊರೆಯನ್ನು ಮಾತ್ರ ಸ್ಥಳೀಯ ಸಂಸ್ಥೆಗಳ ಮೇಲೆ ಹೊರಿಸುತ್ತಿರುವುದರಿಂದ ಅವುಗಳಿಗೆ ಮೂಲಭೂತ ಜವಾಬ್ದಾರಿಯನ್ನು ನಿರ್ವಹಿಸಲಾಗದಿರುವ ಬಗ್ಗೆ ಜನಪ್ರತಿನಿಧಿಗಳಿಂದ ಇಲಾಖೆಗೆ ಸಲ್ಲಿಸಿದ ಮನವಿಯ ಕುರಿತು ಏನು ಕ್ರಮ ವಹಿಸಲಾಗುತ್ತಿದೆ ;

(ಇ) ಕಟ್ಟಡ ಪರವಾನಿಗೆ, ಪ್ರಾರಂಭಿಕ ಪ್ರಮಾಣ ಪತ್ರ, ಕಟ್ಟಡ ಸಂಖ್ಯೆ ಮನೆ/ಕಟ್ಟಡ/ಕೊಳವೆ ಬಾವಿ/ ವಿದ್ಯುತ್ ನಿರಾಕ್ಷೇಪಣಾ ಪತ್ರ, ನಮೂನೆ ೯/೧೧, ೧೧ಬಿ, ಭೂಪರಿವರ್ತನೆ ನಿರಾಕ್ಷೇಪಣಾ ಪತ್ರ, ಫಾರ್ಮ ಹೌಸ್, ಕುರಿ/ದನ/ಕೋಳಿ ಶೆಡ್, ರಸ್ತೆ ಅಂಚು, ಇತ್ಯಾದಿಗಳ ಕುರಿತಂತೆ ಅಗತ್ಯವಿರುವ ನಿಯಮಗಳನ್ನು ರೂಪಿಸಿದೆಯೇ ; ಇಲ್ಲದಿದ್ದರೆ, ಯಾವಾಗ ರಚಿಸಲಾಗುವುದು ;

(ಈ) ಪ್ರಾಕೃತಿಕ ವಿಕೋಪಗಳ ಸಂದರ್ಭದಲ್ಲಿ ಮತ್ತು ಇತರ ಅನಿವಾರ್ಯ ಸನ್ನಿವೇಶಗಳಲ್ಲಿ ತುರ್ತಾಗಿ ಭರಿಸಬೇಕಾದ ವೆಚ್ಚಗಳಿಗೆ ನಿಗಧಿಪಡಿಸಿದ ಮಿತಿಯೆಷ್ಟು ; ಗ್ರಾಮ ಪಂಚಾಯತಿ ಆಯವ್ಯಯ ಮತ್ತು ಲೆಕ್ಕಪತ್ರ

ನಿಯಮಗಳಲ್ಲಿ ಉಲ್ಲೇಖಿಸಿದ ಈ ವೆಚ್ಚಗಳಿಗೆ ಗ್ರಾಮ ಪಂಚಾಯತಿಯಲ್ಲಿ ಆದಾಯ ಮೂಲ ಯಾವುದು ಮತ್ತು ಈ ವೆಚ್ಚಗಳಿಗೆ ಅನುಮೋದನೆ ನೀಡಲು ನಿಯಮಗಳನ್ನು ಯಾವಾಗ ರಚಿಸಲಾಗುವುದು ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಚುನಾಯಿತ ಪ್ರತಿನಿಧಿಗಳು ಅಧಿಕಾರಿ/ನೌಕರರ ಬೇಡಿಕೆಯ ಈಡೇರಿಕೆ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೬೪ (೬೫೯) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು, ನೌಕರರ/ಚುನಾಯಿತ ಪ್ರತಿನಿಧಿಗಳು ಕಳೆದ ಅಕ್ಟೋಬರ್–೨೦೨೪ರಲ್ಲಿ ಎಷ್ಟು ದಿನಗಳ ಮುಷ್ಕರ ನಡೆಸಿದ್ದರು ; ಇವರ ಬೇಡಿಕೆಗಳು ಯಾವುವು ;

(ಆ) ರಾಜ್ಯದಲ್ಲಿ ಮಂಜೂರಾದ ಸಹಾಯಕ ನಿರ್ದೇಶಕರ ಹುದ್ದೆಗಳು ಎಷ್ಟು ; ಮತ್ತು ಖಾಲಿ ಇರುವ ಸಹಾಯಕ ನಿರ್ದೇಶಕರ ಹುದ್ದೆಗಳು ಎಷ್ಟು ; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು)

(ಇ) ಹಿರಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಎಷ್ಟು ಹುದ್ದೆ ಸೃಜಿಸಲಾಗಿದೆ ; ಯಾವ ರೀತಿ ಸದರಿ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ; ಜೇಷ್ಠತಾ ಪಟ್ಟಿ ಅಂತಿಮಗೊಂಡಿದ್ದರೂ ಸಹ ಬಡ್ತಿ ನೀಡದೆ ಇರಲು ಕಾರಣಗಳೇನು ;

(ಈ) ತುರ್ತಾಗಿ ಸದರಿ ಹುದ್ದೆಗಳಿಗೆ ಬಡ್ತಿ ನೀಡಲು ಸರ್ಕಾರ ಕೈಗೊಂಡ ಕ್ರಮಗಳೇನು ; ಯಾವ ಕಾಲಮಿತಿಯಲ್ಲಿ ಬಡ್ತಿ ನೀಡಲಾಗುವುದು ;

(ಉ) ಅಧಿಕಾರಿಗಳು, ನೌಕರರು/ಚುನಾಯಿತ ಪ್ರತಿನಿಧಿಗಳ ಬೇಡಿಕೆ ಈಡೇರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಗಳಿಂದ ಸಂಗ್ರಹವಾಗುತ್ತಿರುವ ತೆರಿಗೆಯ ಬಗ್ಗೆ

ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –

೬೫ (೬೮೧) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯವು ಗ್ರಾಮ ಪಂಚಾಯತಿಯಿಂದ ತೆರಿಗೆ ಸಂಗ್ರಹಣೆಯಲ್ಲಿ ರಾಷ್ಟ್ರದಲ್ಲಿ ಎಷ್ಟನೇ ಸ್ಥಾನದಲ್ಲಿದೆ ; (ವಿವರ ಒದಗಿಸುವುದು)

(ಆ) ರಾಜ್ಯದಲ್ಲಿರುವ ಗ್ರಾಮ ಪಂಚಾಯಿತಿಯಿಂದ ಎಷ್ಟು ತೆರಿಗೆ ಮೊತ್ತ ಸಂಗ್ರಹವಾಗಿದೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಇ) ಸಂಗ್ರಹವಾದ ತೆರಿಗೆ ಮೊತ್ತದಿಂದ ಯಾವ ಯಾವ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿದೆ ; ಎಷ್ಟು ಮೊತ್ತವನ್ನು ಕಾಮಗಾರಿಗಳಿಗೆ ಉಪಯೋಗಿಸಿ ಬಾಕಿ ಇರುವ ಮೊತ್ತ ಎಷ್ಟು ; (ವಿವರ ಒದಗಿಸುವುದು)

(ಈ) ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಬಾಕಿ ಇರುವ ಕಾಮಗಾರಿಗಳು ಯಾವುವು ; ಬಾಕಿ ಇರುವ ಕಾಮಗಾರಿಗಳನ್ನು ಯಾವ ಕಾಲಮಿತಿಯೊಳಗೆ ಕೈಗೆತ್ತಿಕೊಳ್ಳಲಾಗುತ್ತದೆ ; (ವಿವರ ಒದಗಿಸುವುದು)

(ಉ) ಸದರಿ ಕಾಮಗಾರಿಗಳಿಗೆ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಮಂಜೂರು ಮಾಡಬೇಕಾದ ಬಾಕಿ ಮೊತ್ತ ಎಷ್ಟು ; ಯಾವ

ಕಾಲಮಿತಿಯೊಳಗೆ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುತ್ತದೆ ?
(ಸಂಪೂರ್ಣ ವಿವರ ಒದಗಿಸುವುದು)

## ಆಸ್ತಿಗಳ ಮ್ಯಾನ್ಯುಯಲ್ ಸಮೀಕ್ಷೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೬೬ (೬೦೪) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ತೆರಿಗೆಗೆ ಒಳಪಡುವ ಸಂಪೂರ್ಣ ಆಸ್ತಿಗಳನ್ನು ಮ್ಯಾನ್ಯುಯಲ್ ಸಮೀಕ್ಷೆ ಮಾಡಲು ಸರ್ಕಾರವು ಆದೇಶ ಹೊರಡಿಸಿದೆಯೇ ; ಆದೇಶದ ವಿವರ ನೀಡುವುದು, ಆದೇಶ ಹೊರಡಿಸಿದ್ದಲ್ಲಿ, ಇಲ್ಲಿಯವರೆಗೆ ಮ್ಯಾನ್ಯುಯಲ್ ಸಮೀಕ್ಷೆ ಮಾಡಲಾದ ಆಸ್ತಿಗಳು ಎಷ್ಟು ;

(ಆ) ಮ್ಯಾನ್ಯುಯಲ್ ಸಮೀಕ್ಷೆ ಮಾಡಲಾದ ಎಲ್ಲಾ ಆಸ್ತಿಗಳ ವಿವರಗಳನ್ನು ನಮೂನೆ-೯ಎ ರಿಜಿಸ್ಟರ್‌ನಲ್ಲಿ ದಾಖಲಿಸಿ, ನಮೂನೆ-೯, ನಮೂನೆ-೧೧ಎ ಮತ್ತು ನಮೂನೆ-೧೧ಬಿ ರಿಜಿಸ್ಟರ್‌ಗಳಲ್ಲಿ ಆಸ್ತಿ ತೆರಿಗೆ ನಿರ್ಧರಣೆ ಮಾಡಲಾಗಿದೆಯೇ ;

(ಇ) ಮ್ಯಾನ್ಯುಯಲ್ ಸಮೀಕ್ಷೆಯಂತೆ ನಮೂನೆ-೯ಎ ರಿಜಿಸ್ಟರ್‌ನಲ್ಲಿರುವ ಆಸ್ತಿ ವಿವರಗಳು ನಮೂನೆ-೯, ನಮೂನೆ-೧೧ಎ ಮತ್ತು ನಮೂನೆ-೧೧ಬಿ ರಿಜಿಸ್ಟರ್‌ಗಳಲ್ಲಿರುವ ಆಸ್ತಿ ತೆರಿಗೆಯ ವಿವರಗಳನ್ನು ಜಿಲ್ಲಾ ನೋಡಲ್ ಅಧಿಕಾರಿಗಳಾದ ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿಗಳು ಪರಿಶೀಲಿಸಿ, ದೃಢೀಕರಿಸಿರುವ ವಿವರಗಳನ್ನು ನೀಡುವುದು ;

(ಈ) ಸರ್ಕಾರದ ಆದೇಶದಂತೆ ನಿಗಧಿತ ಅವಧಿಯಲ್ಲಿ ಮ್ಯಾನ್ಯುಯಲ್ ಸಮೀಕ್ಷೆ ಪೂರ್ಣಗೊಳಿಸಿ, ನಿಗಧಿತ ನಮೂನೆ-೯, ನಮೂನೆ-೧೧ಎ ಸದರಿ ಮತ್ತು ನಮೂನೆ-೧೧ಬಿ ರಿಜಿಸ್ಟರ್‌ಗಳಲ್ಲಿ ದಾಖಲಿಸಲು ಕ್ರಮಕೈಗೊಳ್ಳದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಿರುವ ಪ್ರಕರಣಗಳು ಎಷ್ಟು ?

## ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-೨೦೧೬ರಂತೆ ಶೇ.೫ ರಷ್ಟು ಮೊತ್ತವನ್ನು ಎಲ್ಲಾ ಇಲಾಖೆಗಳಲ್ಲಿ ಮೀಸಲಿಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೭. (೫೬೭) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-೨೦೧೬ರ ಸೆಕ್ಷನ್ ೩೭ರ ರೀತ್ಯಾ ಸರ್ಕಾರದ ಎಲ್ಲಾ ಇಲಾಖೆಗಳು ತನ್ನ ಅಭಿವೃದ್ಧಿ ಯೋಜನೆಯ ಒಟ್ಟು ಆಯ-ವ್ಯಯದಲ್ಲಿ ವಿಕಲಚೇತನ ವ್ಯಕ್ತಿಗಳಿಗೆ ಶೇ. ೫ ರಷ್ಟು ಮೀಸಲಾತಿ ನೀಡಿದೆಯೇ ; (ವಿವರಗಳೊಂದಿಗೆ ಮಾಹಿತಿ ಒದಗಸುವುದು)

(ಆ) ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ-೨೦೧೬ರ ಸೆಕ್ಷನ್ ೩೭ರ ರೀತ್ಯಾ ಯಾವ ಯಾವ ಇಲಾಖೆಗಳು ಶೇ.೫ ರಷ್ಟು ಮೊತ್ತವನ್ನು ವಿಕಲಚೇತನ ವ್ಯಕ್ತಿಗಳಿಗೆ ಮೀಸಲಿಟ್ಟಿವೆ ; ಮೀಸಲಿಟ್ಟಿರುವ ಅನುದಾನವನ್ನು ವಿಕಲಚೇತನ ವ್ಯಕ್ತಿಗಳ ಅಭಿವೃದ್ಧಿಗೆ ಉಪಯೋಗಿಸಲು ಅಳವಡಿಸಿಕೊಂಡಿರುವ ಮಾನದಂಡಗಳೇನು ; (ಇಲಾಖಾವಾರು ಮಾಹಿತಿ ನೀಡುವುದು)

(ಇ) ಈ ರೀತಿ ಮೀಸಲಾತಿ ನೀಡದೆ ಇದ್ದಲ್ಲಿ, ವಿಕಲಚೇತನ ವ್ಯಕ್ತಿಗಳ ಹಕ್ಕುಗಳನ್ನು ನಿರ್ಲಕ್ಷಿಸಿದಂತಾಗುವುದಿಲ್ಲವೇ ;

(ಈ) ಸಚಿವ ಸಂಪುಟ ಸಭೆಯಲ್ಲಿ ಈ ಬಗ್ಗೆ ತೀರ್ಮಾನಿಸುವ ಅವಶ್ಯಕತೆ ಇದೆಯೇ ; ಇದಕ್ಕೆ ಯಾವುದೇ ಆರ್ಥಿಕ ಹೊರೆ ಇಲ್ಲದೆ ಇರುವುದರಿಂದ ಇಲಾಖೆಯ ಆದೇಶ ಹೊರಡಿಸಿ ಕ್ರಮಕೈಗೊಂಡು ಈ ಮೀಸಲಾತಿ

ಆಯ–ವ್ಯಯವನ್ನು ವಿಕಲಚೇತನ ವ್ಯಕ್ತಿಗಳ ಅಭಿವೃದ್ಧಿಗೆ ಉಪಯೋಗಿಸಲು ಮಾರ್ಗಸೂಚಿಗಳನ್ನು ರಚಿಸಲು ಸಾಧ್ಯವಿಲ್ಲವೆ ? (ಮಾಹಿತಿ ಒದಗಿಸುವುದು)

## ವಸತಿ ನಿಲಯಗಳಲ್ಲಿನ ಸಮಸ್ಯೆಗಳ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೮ (೬೧೯) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಯ ವಸತಿ ನಿಲಯಗಳಲ್ಲಿ ಖಾಲಿ ಇರುವ ಮೇಲ್ವಿಚಾರಕರ ಹುದ್ದೆಗಳನ್ನು ನೇಮಕಾತಿ ಮಾಡಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಹಾಗಿದ್ದಲ್ಲಿ, ಯಾವ ಹಂತದಲ್ಲಿದೆ ; (ವಿವರ ನೀಡುವುದು)

(ಆ) ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಸಂಬಂಧಿಸಿದಂತೆ ಆಹಾರ ದಾಸ್ತಾನು ಸಾಮಗ್ರಿಗಳ ಸರಬರಾಜು, ಟೆಂಡರ್ ಪ್ರಕ್ರಿಯೆ ನಿಗಧಿತ ಸಮಯಕ್ಕೆ ಆಗದೆ ಇರುವುದರಿಂದ ಮಕ್ಕಳು ಮತ್ತು ಮೇಲ್ವಿಚಾರಕರು ತೊಂದರೆ ಅನುಭವಿಸುತ್ತಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಸರ್ಕಾರವು ಈ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದೆ ? (ಮಾಹಿತಿ ಒದಗಿಸುವುದು)

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವಿವಿಧ ವೃಂದದ ಸಂಘಗಳ ಬೇಡಿಕೆಗಳನ್ನು ಈಡೇರಿಸುವ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೬೯ (೬೩೬+೬೮೯) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಎಲ್ಲಾ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯತ್ ಸದಸ್ಯರ ಒಕ್ಕೂಟಗಳು ಜಂಟಿಯಾಗಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಮುಷ್ಕರ ನಡೆಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರ ಪ್ರಮುಖ ಬೇಡಿಕೆಗಳೇನು ;

(ಆ) ಹಲವಾರು ಬಾರಿ ಪ್ರತಿಭಟನೆ ನಡೆಸಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರವನ್ನು ಒತ್ತಾಯಿಸುತ್ತಿದ್ದರೂ, ಸರ್ಕಾರವು ಕೇವಲ ಭರವಸೆ ನೀಡಿ ಯಾವುದೇ ಕ್ರಮ ಕೈಗೊಳ್ಳದೆ ಇರುವುದು ನಿಜವೇ ;

(ಇ) ಈ ಒಕ್ಕೂಟಗಳ ಬೇಡಿಕೆಗಳಿಗೆ ಯಾವ ಕಾಲಮಿತಿಯಲ್ಲಿ ಪರಿಹಾರ ಒದಗಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ;

(ಈ) ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರುಗಳಿಗೆ ಮಾಸಿಕ ಗೌರವಧನವನ್ನು ಕೇರಳ ರಾಜ್ಯದಲ್ಲಿರುವಂತೆ ಹೆಚ್ಚಿಸಲು ಆದೇಶಿಸುವಂತೆ ಮನವಿ ಸಲ್ಲಿಸಿದ್ದು, ಸರ್ಕಾರ ಗೌರವಧನ ಹೆಚ್ಚಿಸಲು ಕೈಗೊಂಡ ಕ್ರಮಗಳೇನು ; (ವಿವರಿಸುವುದು)

(ಉ) ಗ್ರಾಮ ಪಂಚಾಯತಿ ಸದಸ್ಯರಿಗೆ ಪಿಂಚಣಿ ನೀಡುವ ವ್ಯವಸ್ಥೆ ಉಚಿತ ಬಸ್ ಪಾಸ್ ಆರೋಗ್ಯ ವಿಮೆ ಮತ್ತು ಹಲವಾರು ಬೇಡಿಕೆಗಳ ಈಡೇರಿಕೆಗಾಗಿ ಹೋರಾಟ ಮಾಡುತ್ತಿದ್ದು, ಸದರಿ ಬೇಡಿಕೆಗಳಿಗೆ ಸರ್ಕಾರ ತೆಗೆದುಕೊಂಡ ಕ್ರಮ ಏನು ?

## ಕೊಪ್ಪಳ ಜಿಲ್ಲೆಯಲ್ಲಿ ವಾಸಿಸುವ ದೇವದಾಸಿ ಮಹಿಳೆಯರ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು)** –

೭೦ (೬೪೪) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ವಾಸಿಸುವ ದೇವದಾಸಿ ಮಹಿಳೆಯರ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಗ್ರಾಮವಾರು ಹೆಸರಿನೊಂದಿಗೆ ಮಾಹಿತಿ ನೀಡುವುದು)

(ಆ) ದೇವದಾಸಿ ಮಹಿಳೆಯರಿಗೆ ಮಾಸಾಶನ ಪ್ರತಿ ತಿಂಗಳು ನೀಡಲಾಗುವುದೆ ; ನೀಡದೆ ಇರಲು ಕಾರಣಗಳೇನು ; (ಮಾಹಿತಿ ನೀಡುವುದು)

(ಇ) ದೇವದಾಸಿ ಮಹಿಳೆಯರಿಗೆ ಇರುವ ಸರ್ಕಾರದ ಪ್ರಸಕ್ತ ಸೌಲಭ್ಯಗಳಾವುವು ; (ಸೌಲಭ್ಯಗಳ/ಯೋಜನೆಗಳ ಪಟ್ಟಿ ನೀಡುವುದು)

(ಈ) ಗ್ಯಾರಂಟಿ ಯೋಜನೆಗಳು ಈ ದೇವದಾಸಿ ಮಹಿಳೆಯರಿಗೆ ತಲುಪದಿರಲು ಕಾರಣಗಳೇನು ; ಇವರಿಗೆ ವಿನಾಯಿತಿ ನೀಡಿ ಈ ಯೋಜನೆ ಸೌಲಭ್ಯ ಕಲ್ಪಿಸಬಹುದೇ ;

(ಉ) ಕಳೆದ ೧೦ ವರ್ಷಗಳಲ್ಲಿ ದೇವದಾಸಿ ಮಹಿಳೆಯರಿಗೆ ಮಂಜೂರಾದ ಮನೆಗಳೆಷ್ಟು ; ಬಾಕಿ ಇರುವ ಮನೆಗಳ ಸಂಖ್ಯೆ ಎಷ್ಟು ?

## ಕರಾವಳಿ ಅಭಿವೃದ್ಧಿ ಮಂಡಳಿಯಲ್ಲಿ ಬಾಕಿ ಇರುವ ವಿವೇಚನಾ ನಿಧಿಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೭೧ (೬೦೯) ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರಾವಳಿ ಅಭಿವೃದ್ಧಿ ಮಂಡಳಿ ಜಾರಿಗೆ ಬರುವುದು ಯಾವಾಗ ; ಈ ಬಗ್ಗೆ ತೆಗೆದುಕೊಂಡ ಕ್ರಮವೇನು ; ೨೦೨೨–೨೩, ೨೦೨೩–೨೪ ಮತ್ತು ೨೦೨೪–೨೫ ರಲ್ಲಿ ಎಷ್ಟು ಅನುದಾನವನ್ನು ಪ್ರಾಧಿಕಾರ ಮೂಲಕ ಖರ್ಚು ಮಾಡಿದೆ ; (ವಿವರ ನೀಡುವುದು)

(ಆ) ಯೋಜನೆಯಲ್ಲಿ ಇಲಾಖೆ ಅಡಿಯಲ್ಲಿ ಬರುವ ಮಂಡಳಿಗಳಿಗೆ ಮಂತ್ರಿಗಳು ತಮ್ಮ "ವಿವೇಚನಾ ನಿಧಿಯನ್ನು" ಎಷ್ಟು ಬಳಕೆ ಮಾಡಿದ್ದಾರೆ ; ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ ; (ವಿವರ ನೀಡುವುದು)

(ಇ) ಯೋಜನಾ ಇಲಾಖೆಯ ಅಧೀನದಲ್ಲಿರುವ ಎಲ್ಲಾ ಮಂಡಳಿಗಳಲ್ಲಿ ಬಾಕಿ/ಬಳಕೆ ಆಗದೇ ಇರುವ ನಿಧಿಯಲ್ಲಿ ದುರುಪಯೋಗವಾಗಿದೆ ಮತ್ತು ನಿಧಿಯನ್ನು ಕಾನೂನು ಬಾಹಿರವಾಗಿ ಬಳಕೆ ಮಾಡಲಾಗಿದೆ ಎಂಬ ದೂರುಗಳಿದ್ದು, ಈ ಬಗ್ಗೆ ಇಲಾಖೆ ಕೈಗೊಂಡಿರುವ ಕ್ರಮವೇನು ; (ವಿವರ ನೀಡುವುದು)

(ಈ) ಯೋಜನಾ ಇಲಾಖೆಯಲ್ಲಿ ಮಂಡಳಿಗೆ ನೀಡಲಾಗುವ ಅನುದಾನವನ್ನು ವಿತರಿಸಲು ಇರುವ ಮಾನದಂಡಗಳೇನು ? (ವಿವರ ನೀಡುವುದು)

## ಗ್ರಾಮ ಪಂಚಾಯತಿಗಳು ವಿದ್ಯುತ್ ನಿಗಮಕ್ಕೆ ಬಾಕಿ ಮೊತ್ತ ಪಾವತಿಸುವ ಬಗ್ಗೆ

**ಡಾ: ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೨ (೫೯೩) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯತಿಗಳು ಸರಿ ಸುಮಾರು ರೂ.೬೦.೦೦ ಲಕ್ಷಗಳಿಗಿಂತ ಹೆಚ್ಚು ಮೊತ್ತವನ್ನು ರಾಜ್ಯದ ವಿದ್ಯುತ್ ನಿಗಮಗಳಿಗೆ ಬಾಕಿ ಉಳಿಸಿಕೊಂಡಿದ್ದು, ಅದಕ್ಕೆ ಬಡ್ಡಿಯನ್ನು ಪಾವತಿಸಬೇಕಾಗಿದ್ದು, ಪಂಚಾಯತಿಗಳು ಉಳಿಸಿಕೊಂಡಿರುವ ವಿದ್ಯುತ್ ಬಾಕಿಯ ಮೊತ್ತವನ್ನು ವಿದ್ಯುತ್ ನಿಗಮಗಳಿಗೆ ಪಾವತಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

(ಆ) ಗ್ರಾಮ ಪಂಚಾಯತಿ ಸದಸ್ಯರಿಗೆ ನೀಡುವ ಗೌರವಧನ ಪಾವತಿಯು ಸುಮಾರು ೬ ತಿಂಗಳುಗಳಿಂದ ಪಾವತಿಸದೆ ಬಾಕಿಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಗೌರವಧನ ಪಾವತಿಗೆ ತೆಗೆದುಕೊಂಡಿರುವ ಕ್ರಮಗಳೇನು ;

(ಇ) ನಗರ ವ್ಯಾಪ್ತಿಯಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಬರುವ ತೆರಿಗೆ ಹಾಗೂ ಇತರೆ ಸಂಪನ್ಮೂಲ ಮೂಲಗಳಿಂದ ಆರ್ಥಿಕವಾಗಿ ಬಲಿಷ್ಠವಾಗಿದ್ದು, ಗ್ರಾಮಾಂತರದಲ್ಲಿರುವ ಪಂಚಾಯತಿಗಳು ಆರ್ಥಿಕವಾಗಿ ದುರ್ಬಲವಾಗಿರುವುದರಿಂದ ಇವುಗಳಿಗೆ ಅನುದಾನ ಹೆಚ್ಚಿಸಲು ಸರ್ಕಾರದ ಹಂತದಲ್ಲಿ ಚಿಂತನೆ ಮಾಡಲಾಗಿದೆಯೇ ?

## ಕರ್ನಾಟಕದಲ್ಲಿ ಅರಣ್ಯ ಹಕ್ಕು ಕಾಯ್ದೆ ೨೦೦೬ರ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಳ್ಳದಿರುವ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೭೩ (೬೬೧) ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅನುಸೂಚಿತ ಬುಡಕಟ್ಟುಗಳ ಮತ್ತು ಇತರೆ ಪಾರಂಪರಿಕ ಅರಣ್ಯವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ ೨೦೦೬ ರ ಮತ್ತು ನಿಯಮಗಳು ೨೦೦೮ರ ಕಾಯ್ದೆಯಡಿಯಲ್ಲಿ ರಾಜ್ಯದ ಬುಡಕಟ್ಟುಗಳಿಗೆ ಅರಣ್ಯ ಹಕ್ಕು ಪತ್ರ ನೀಡುವ ಪ್ರಕ್ರಿಯೆಯು ನಿಧಾನಗತಿಯಲ್ಲಿ ಸಾಗಲು ಕಾರಣಗಳೇನು ; (ವಿವರಿಸುವುದು)

(ಆ) ಈವರೆಗೆ ರಾಜ್ಯದಲ್ಲಿ ಪರಿಶಿಷ್ಟ ಪಂಗಡದವರಿಗೆ ಮತ್ತು ಪಾರಂಪರಿಕ ಅರಣ್ಯ ವಾಸಿಗಳಿಗೆ ನೀಡಿರುವ ವೈಯಕ್ತಿಕ ಮತ್ತು ಸಮುದಾಯ ಹಕ್ಕುಪತ್ರಗಳ ಸಂಪೂರ್ಣ ಮಾಹಿತಿ ಜಿಲ್ಲಾವಾರು ನೀಡುವುದು ;

(ಇ) ಈ ಕಾಯ್ದೆಯಡಿಯಲ್ಲಿ ಜಿಲ್ಲಾವಾರು ಸ್ವೀಕೃತಗೊಂಡಿರುವ ಅರ್ಜಿಗಳು ಮತ್ತು ಹಕ್ಕುಪತ್ರ ನೀಡಿರುವ ಕುಟುಂಬಗಳು, ತಿರಸ್ಕೃತಗೊಂಡಿರುವ ಅರ್ಜಿಗಳು ಮತ್ತು ಬಾಕಿ ಇರುವ ಅರ್ಜಿಗಳೆಷ್ಟು ? (ವಿವರವಾದ ಮಾಹಿತಿ ನೀಡುವುದು)

## ಹದಿನೈದನೆಯ ಹಣಕಾಸು ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರ

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೭೪ (೫೭೮) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ೧೫ನೆಯ ಹಣಕಾಸು ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತ್‌ಗಳಲ್ಲಿ ಕೈಗೊಂಡ ಕಾಮಗಾರಿಗಳಾವುವು ; (ಗ್ರಾಮ ಪಂಚಾಯತ್‌ವಾರು ಮತ್ತು ವರ್ಷವಾರು ವಿವರ ನೀಡುವುದು)

(ಆ) ಸದರಿ ಜಿಲ್ಲೆಗಳಿಗೆ ೧೫ನೆಯ ಹಣಕಾಸು ಯೋಜನೆಯಲ್ಲಿ ಮೂರು ವರ್ಷಗಳಲ್ಲಿ ಮತ್ತು ಪ್ರಸ್ತುತ ಆರ್ಥಿಕ ವರ್ಷದಲ್ಲಿ ಬಿಡುಗಡೆಯಾದ ಅನುದಾನ ಎಷ್ಟು ? (ಗ್ರಾಮ ಪಂಚಾಯತ್‌ವಾರು ಮತ್ತು ಕಂತುವಾರು ಬಿಡುಗಡೆ ಮಾಡಿದ ದಿನಾಂಕ ಸಹಿತ ವಿವರಗಳನ್ನು ನೀಡುವುದು)

## ಹಾವೇರಿ ಜಿಲ್ಲೆಯಲ್ಲಿರುವ 'ನಿಜಶರಣ ಅಂಬಿಗರ ಚೌಡಯ್ಯ' ಅವರ ಸಮಾಧಿ ಗದ್ದುಗೆ ದುರಸ್ತಿ ಮಾಡುವ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೭೫ (೫೯೪) ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ಗುತ್ತಲದ ಹತ್ತಿರ ತುಂಗಭದ್ರಾ ನದಿಯ ತೀರದಲ್ಲಿ ಚೌಡದಾನಪುರದಲ್ಲಿ 'ನಿಜಶರಣ ಅಂಬಿಗರ ಚೌಡಯ್ಯ' ಶರಣರ ಸಮಾಧಿಯ ಗದ್ದುಗೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸಮಾಧಿಯ ಗದ್ದುಗೆ ದುಸ್ಥಿತಿಯಲ್ಲಿರುವುದು ನಿಜವೇ ;

(ಇ) ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯನ್ನು ಕೂಡಲಸಂಗಮ ಬಸವಣ್ಣನವರ ಗದ್ದುಗೆಯನ್ನು ಕಟ್ಟಿದ ಮಾದರಿಯಲ್ಲಿ ಕಟ್ಟಡ ನಿರ್ಮಾಣ ಮಾಡಿ ಜನರಿಗೆ ದರ್ಶನ ಪಡೆಯಲು ಅನುಕೂಲ ಮಾಡಲು ಸರ್ಕಾರ ನಿರ್ಧಾರ ತೆಗೆದುಕೊಳ್ಳಲಿದೆಯೇ ?

ಕೆ.ಆರ್. ಮಹಾಲಕ್ಷ್ಮಿ

ಕಾರ್ಯದರ್ಶಿ

ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಕಾಸೂ-601, 600 ಪ್ರತಿಗಳು (ಪಿ6)

**List of Questions for Oral Answers**

**Total No. of Questions - 15**

**LIST - 5**

# KARNATAKA LEGISLATIVE COUNCIL

## ONE HUNDRED AND FIFTY FOURTH SESSION

**Friday, the 13th December, 2024**

---

### GROUP - V

1. Minister for Social Welfare
2. Minister for Rural Development and Panchayat Raj and Information Technology and Bio-Technology
3. Minister for Agriculture
4. Minister for Labour
5. Minister for Backward Classes Welfare and Kannada and Culture
6. Minister for Planning and Statistics
7. Minister for Women and Child Development and Empowerment of Differently Abled and Senior Citizens

---

### COMMENCEMENT OF ANGANWADI CENTRES

**Sri T.N.Javarayi Gowda (Elected by Legislative Assembly) -**

61 (571) Will the Minister for Women and Child Development and Empowerment of Differently Abled and Senior Citizens be pleased to state:-

(a) the number of anganwadi centres in the State; the number of anganwadi centres which have own building; the number of anganwadi centres which are functioning in rented building; (districtwise information in this regard be furnished)

(b) the number of anganwadi centres which are functioning in rented building or the building of the Government schools in Bengaluru urban district; (talukwise and anganwadi centrewise information be furnished)

(c) the steps taken by the Government to construct the new building for anganwadi centres which have not own building; the number of anganwadi buildings that have been constructed during the last 2 years; (details be furnished)

(d) the year from which the anganwadi centre is functioning in K.Hosahalli (Gollaraplaya) of Yeshwanthpur hobli of Bengaluru North taluk belonging to Bengaluru urban district;

(e) whether it has come to the notice of the Government that this anganwadi centre is functioning in the room of the Government school and the Government school has compelled to immediately vacate of the room where this anganwadi is functioning;

(f) if so, the date on which the building of the anganwadi centre of K. Hosahalli (Gollarapalya )village would be constructed; (details be furnished)

(g) whether the step has been taken by the Government to commence the new anganwadi centres in the State; if so, the number of new anganwadi centres that would be commenced in various districts; (details be furnished)

(h) the Lingadeeranahalli village of Bengaluru North taluk having the eligibility to commence the anganwadi centre, whether it has come to the notice of the Government that any action has not been taken so far eventhough the proposal has been submitted to the Government to commence the new anganwadi centre; If so, whether the anganwadi centre would be commenced during the year 2024-25, newly?

## REGARDING SC/ST HOSTELS

**Sri Manje Gowda C.N (Local Authorities Constituency) -**

62 (615) Will the Minister for Social Welfare be pleased to state:-

(a) the number of hostels existing in Mysuru district to facilitate for the students belonging to scheduled castes and scheduled tribes; (legislative assembly constitutencywise information be furnished)

(b) the number of students who are studying in the said hostels;

(c) the number of hostels which have own building; the number of hostels which are functioning in rented building;

(d) the amount that has been provided for the construction of own building during the year 2024-25; and the amount that has been spent;

(e) the timelimit within which the facility would be provided by shifting the rented building to own buildings?

## REGARDING RURAL DEVELOPMENT AND PANCHAYAT RAJ DEPARTMENT

**Sri Manjunatha Bhandari (Local Authorities Constituency) -**

63 (671) Will the Minister for Rural Development and Panchayat Raj and Information Technology and Bio-Technology be pleased to state:-

(a) the reason for the monitoring power of 28 departments which are functioning in rural area has not been handed over to the local gram panchayat; the date on which the step would be taken to hand over the same;

(b) since merely burden of responsibility has been imposed on local bodies without giving any power, the step that is being initiated regarding the requisition which has been submitted to the department by the representatives with regard to non maintenance of the basic responsibilities by them;

(c) whether the required rules have been chalked out with regard to building license, commencement certificate, building number, no objection certificate of house/building/bore well, no objection certificate of electricity, form 9/11, 11B, no objection certificate of land conversion, farmhouse, sheep/cattle/poultry shed and roadverge etc's; if not, the date on which same would be chalkedout;

(d) the limit that has been fixed for the costs that have to be beared urgently during the natural disasters and other emergency situation; the particular of source in the gram panchayat for the expenditure that have been referred in the rules of budget and

accounts of gram panchayat and the date on which the rules would be chalkedout to provide the approval for the expenditure?

## DEMANDS OF ELECTED REPRESENTATIVES AND OFFICERS/EMPLOYEES OF RURAL DEVELOPMENT AND PANCHAYAT RAJ DEPARTMENT

**Sri Chidanand M.Gowda (Graduates' Constituency)**

64 (659) Will the Minister for Rural Development and Panchayat Raj and Information Technology and Bio-Technology be pleased to state:-

(a) the number of days for which the protest have been conducted by the officers, employees/elected representatives of Rural Development and Panchayat Raj department in the last October-2024; the particulars of demand for the same;

(b) the number of posts of assistant director that have been sanctioned in the State; and the number of posts of assistant director that are lying vacant; (districtwise and talukwise details be furnished)

(c) the number of posts of senior panchayat development officers that have been created; the manner in which the said posts would be filled up; the reasons for not given the promotion even though the seniority list has been finalized;

(d) the steps taken by the Government to give the promotion to the said posts immediately; the timelimit within which the promotion would be issued;

(e) the steps taken by the Government to fulfill the demand of the officers, employees/elected representatives?

## TAX COLLECTED BY THE GRAM PANCHAYATS IN THE STATE

**Sri Naveen. K.S (Local Authorities Constituency) -**

65 (681) Will the Minister for Rural Development and Panchayat Raj and Information Technology and Bio-Technology be pleased to state:-

(a) the present position of the State in the collection of tax from the gram panchayat in the nation; (details be furnished)

(b) the amount of tax that has been collected by the gram panchayats in the State; (districtwise information be furnished)

(c) the particulars of works that have been taken up in the limit of gram panchayat out of the amount that has been collected from the tax; the amount that has been spent for the works and the outstanding amount there of; (details be furnished)

(d) the particulars of works that have been taken up by the rural development and panchayat raj department in the State; the particulars of works which have been pending; the timelimit within which the pending works would be taken up; (details be furnished)

(e) the grant that has been sanctioned for the said works; the outstanding amount to be sanctioned; the timelimit within which the outstanding amount would be sanctioned? (complete details be furnished)

## MANUAL SURVEY OF PROPERTIES

**Sri N. Ravikumar (Elected by Legislative Assembly) -**

66 (604) Will the Minister for Rural Development and Panchayat Raj and Information Technology and Bio-Technology be pleased to state:-

(a) whether the order has been issued by the Government to conduct the manual survey of all properties which have coming under the tax in the gram panchayats of the State; the details of the order be furnished; if so, the number of properties which have been conducted the manual survey so far;

(b) whether the property tax has been determined in the Form-9, Form 11- A and Form 11- B registers by recording the details of all properties which have been carried out during manual survey in the Form-9A register;

(c) the property details in the Form-9A register and the details of property tax in the Form-9, Form- 11 A and Form-11 B that have been verified and certified by the deputy secretary of zilla panchayat who are the district nodal officer of the district as per the manual survey be furnished;

(d) the number of cases in which disciplinary action has been initiated against the panchayat development officers who have not taken up the action to record the prescribed Form-9, Form-11 A and Form-11 B registers by completing the manual survey in the prescribed period as per the Government order?

**AMOUNT EARMARKED FOR DIFFRENTLY ABLED PERSONS**

**Sri Y.M.Satish (Local Authorities Constituency) -**

67 (567) Will the Minister for Women and Child Development and Empowerment of Differently Abled and Senior Citizens. be pleased to state:-

(a) whether 5% of reservation has been provided for the differently abled persons by all the departments of

the Government in the total budget of development schemes as per the section 37 of the rights of persons with disabilities Act, 2016; (information along with details furnished)

(b) the particulars of departments which have earmarked 5% of grant for the differently abled persons as per the section 37 of the rights of persons with disabilities Act, 2016; the criterias that have been followed to utilise the earmarked grant for the development of differently abled persons; (departmentwise information be furnished)

(c) if not, whether it has caused to negligence of the rights of differently abled persons;

(d) whether there is a necessity of the decision to be taken up in the cabinet meeting in this regard; whether there is no possibility to frame the guidelines to utilise this earmarked budget for the development of differently abled persons by taking action after issuance of order by the department as there is no any financial burden for the same?

**PROBLEMS IN HOSTELS**

**Sri Sharanagouda Bayyapur (Local Authorities Constituency) -**

68 (619) Will the Minister for Social Welfare be pleased to state:-

(a) whether the proposal is before the Government to recruit the posts of warden which are lying vacant in the hostels of Raichur and koppal districts; if so, the present stage of the same; (details be furnished)

(b) whether it has come to the notice of the Government about the fact that hardship is being faced by the children and wardens due to the tender process of supply of food stock items has not been executed with in for the stipulated time with regard to the hostels of social welfare department of Raichur and Koppal districts; if so, the step taken by the Government in this regard? (information be furnished)

**FULFILLMENT OF THE DEMANDS OF VERIOUS CADRE ASSOCIATIONS OF RURAL DEVELOPMENT AND PANCHAYAT RAJ DEPARTMENT**

**Dr. Dhananjaya Sarji (Graduates' Constituency) -**

**Sri Arun D.S (Local Authorities Constituency) -**

69 (636+689) Will the Minister for Rural Development and Panchayat Raj and Information Technology and Bio-Technology. be pleased to state:-

(a) whether it has come to the notice of the Government that the protest has been taken place jointly by all cadres association of rural development and panchayat raj department and unions of gram panchayat members for the fulfillment of the various demands; if so, the particulars of major demands there of;

(b) whether it is true that any step has not been taken by the Government by giving only assurance eventhough they are urging the Government for the fulfilment of various demands by protesting so many times;

(c) the timelimit within which the particular of action would be taken by the Government to provide the solution for the demands of these unions;

d) the requisition has been submitted to enhance the monthly honorarium for the president, vice-president and members of the gram panchayat on par with Kerala State, the steps taken by the Government to enhance the honorarium; explain there of;

(e) the members of gram panchayat are protesting for the fulfillment of pension system, free bus pass, health insurance and various demands, the step taken by the Government for the said demands?

**DEVADASI WOMEN IN KOPPAL DISTRICT**

**Smt. Hemalatha Nayak (Elected by Legislative Assembly) -**

70 (644) Will the Minister for Women and Child Development and Empowerment of Differently Abled and Senior Citizens. be pleased to state:-

(a) the number of devadasi women residing in Koppal district; (talukwise and villagewise information along with name be furnished)

(b) whether the pension would be provided to devadasi women every month; the reasons for not being provided; (information be furnished)

(c) the particulars of prevailing facilities of the Government that are available to devadasi women; (facilities/schemes list be furnished)

(d) the reasons for non-reaching of the guarantee schemes for these devadasi women; whether the facility of this scheme would be provided by exempted them;

(e) the number of houses that have been sanctioned to devadasi women during the last 10 years; the number of houses remaining for the same?

## OUTSTANDING DISCRETIONARY GRANT IN KARAVALI DEVELOPMENT BOARD

**Sri. Ivan D'Souza (Elected by Legislative Assembly)**

71 (609) Will the Minister for Planning and Statistics be pleased to state:-

(a) the date on which the karavali development board will come into force; the measure that has been taken in this regard; the grant that has been spent by the authority during the year in 2022- 23, 2023-24 and 2024-25; (details be furnished)

(b) the discretionary grant that has been spent by the Ministers for the boards which are coming under the planning department; the particulars of the schemes for which the same has been spent; (details be furnished)

(c) there are complaints about the misappropriation of the grant out of the outstanding and unspent grant and that has been utilized illegally in all boards which are coming under the planning department, the measure taken by the department in this regard; (details be furnished)

(d) the prevailing criteria for distribution of the grant that has been provided to the boards in the planning department? (details be furnished)

## PAYMENT OF OUTSTANDING AMOUNT TO POWER CORPORATIONS

**Dr. D.Thimmaiah (Local Authorities Constituency)**

72 (595) Will the Minister for Rural Development and Panchayat Raj and Information Technology and Bio-Technology be pleased to state:-

(a) aproximately more than Rs.60 lakhs of outstanding amount to the power corporation of the State and the interest should be paid by the gram panchayat, the measures that have been taken by the Government for the payment of the outstanding amount to the power corporations by the gram panchayat;

(b) whether it has come to the notice of the Government that the payment of honorarium to gram panchayat members has been due for six months; the measures taken for the payment of honorarium;

(c) since the gram panchayat which are coming in the limit of urban areas have sound financial stability from the taxes they receive and other resources, at the same time the panchayat which are coming in the limit of rural areas have weak financial stability whether the contemplation has been made in the Government level to enhance the grant for them?

## NOT PROPER IMPLEMENTATION OF SCHEME OF FOREST RIGHTS ACT, 2006 IN KARNATAKA

**Sri. Shantharama Budna Siddi (Nominated)**

73 (661) Will the Minister for Social Welfare. be pleased to state:-

(a) the reasons for the slow down phase in the process of issuance of the title deed for tribal people those cultivating forest land in the State under the schedule tribes and other traditional forest dwellers (recognisation of forest rights) Act, 2006 and rules 2008; (explanation there of)

(b) the districtwise complete information of individual and community title deeds that have been issued for the

scheduled tribes and traditional forest dwellers in the State so far be furnished;

(c) the number of districtwise applications that have been received and the number of title deed that have been distributed for the families and the number of applications that have been rejected and pending under this Act? (detailed information be furnished)

**WORKS UNDER 15TH FINANCE SCHEME**

**Sri Sunilgouda Patil (Local Authorities Constituency)**

74 (578) Will the Minister for Rural Development and Panchayat Raj and Information Technology and Bio-Technology. be pleased to state:-

(a) the particulars of works that have been taken up under 15th finance scheme in the gram panchayats of Vijayapura and Bagalkote districts during the last 3 years; (gram panchayatwise and yearwise details be furnished)

(b) the grant that has been released during the last 3 years and the current financial year under 15th finance scheme to the said districts? (the details of panchayatwise and installmentwise of amount has been released along with the date be furnished)

**REPAIR OF NIJASHARANA AMBIGARA (GADDUGE) CHOWDAIAH IN HAVERI DISTRICT**

**Dr.Talwar Sabanna (Nominated)**

75 (594) Will the Minister for Backward Classes Welfare and Kannada and Culture be pleased to state:-

(a) whether it has come to the notice of the Government that there is a Nija Sharana Ambigara Chowdaiah

gadduge in Chowdadanapura on the bank of Tungabhadra river near Guttala of Haveri district;

(b) whether it is true that this gadduge of samadhi is in dilapidated condition;

(c) whether the decision would be taken by the Government to facilitate the people who visit the gadduge of samadhi of ambigara chowdaiah by constructing in the model of gadduge of Basavanna in the Kudala Sangama ?

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, PWS-601-Bengaluru, P2